# ಶರಣ ಸಾಹಿತ್ಯದಲ್ಲಿ ಮಾನವಧರ್ಮ

**ಡಾ.ಬಸವರಾಜ ಪೂಜಾರ್, ಸಹ ಪ್ರಾಧ್ಯಾಪಕರು-ಕನ್ನಡ, ಎಸ್ ಜಿ ಕಾಲೇಜು,ಕೊಪ್ಪಳ.**

## ಪೀಠಿಕೆ:

ವಚನಕಾರರು ಹಲವು ವೃತ್ತಿಗಳ ಕಾಯಕ ಜೀವಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಅರಿವಿನ ಅನುಸಂಧಾನವನ್ನು ಮಾಡಿದ್ದು ನಾಡಿನ ಚರಿತ್ರೆಯಲ್ಲಿ ಹೊಸ ಚಿಂತನೆಗೆ ನಾಂದಿಯಾಯಿತು. ಪರಂಪರಾನುಗತವಾಗಿ ಬಂದಿದ್ದ ಸಾಮಾಜಿಕ ತಿಳುವಳಿಕೆಗೆ ವಿಭಿನ್ನವಾದ ತಿಳುವಳಿಕೆಯನ್ನು ತಮ್ಮ ನಡೆ ನುಡಿಯ ಮೂಲಕ ಕಟ್ಟಿಕೊಟ್ಟರು. ಬಹಿಸ್ಕೃತವಾದ ಸಮಾಜವನ್ನು ಕೇಂದ್ರವಾಗಿಟ್ಟುಕೊಂಡು ಆಲೋಚಿಸುವ ವಿಧಾನವನ್ನು ಹುಟ್ಟು ಹಾಕಿದರು. ಅದಕ್ಕೆ ಅನುಭವವೇ ಮುಖ್ಯ ದೀವಿಗೆಯಾಯಿತು. ಅನುಭವವನ್ನು ತುಂಬಿಕೊಂಡ ಪ್ರತಿಯೊಬ್ಬರು ಅಭಿವ್ಯಕ್ತಿಯ ಸಾಧ್ಯತೆಯನ್ನು ಕಂಡುಕೊಳ್ಳಬಹುದೆಂಬ ಆತ್ಮವಿಶ್ವಾಸವನ್ನು ತುಂಬಿದರು. ಜಾತಿ, ಧರ್ಮ ಕಾರಣಕ್ಕೆ ಅಕ್ಷರ ಜ್ಞಾನಕ್ಕೆ ತೆರೆದುಕೊಳ್ಳದ ಸಮುದಾಯವನ್ನು ವಚನಕಾರರು ಅಕ್ಷರಜ್ಞಾನದ ಬಾಗಿಲನ್ನು ತೆರೆದರು. ಅಲ್ಲಿ ನೂರಾರು ವೃತ್ತಿಪರರು ಕಾಯಕ ಅನುಭವದೊಂದಿಗೆ ತಮ್ಮ ಚಿಂತನೆಯನ್ನು ಅಭಿವ್ಯಕ್ತಿಸಿದರು. ಇದರಿಂದ ಸಾಹಿತ್ಯವು ವೈವಿಧ್ಯತೆಯನ್ನು ಪಡೆಯಿತು. ಸಾಹಿತ್ಯದ ಏಕಮುಖ ಮಾದರಿಯು ವಿಭಿನ್ನ ಆಯಾಮವನ್ನು ಪಡೆಯಿತು. ವೃತ್ತಿ ಪರಿಭಾಷೆಗಳು ದೈವಿಕ ಅಂಶವನ್ನು ಪಡೆದುಕೊಂಡವು. ಸಮಷ್ಟಿ ನೆಲೆಯಲ್ಲಿ ವೃತ್ತಿ ಘನತೆಯು ಬೆಳೆಯಿತು. ಕಾಯಕದಲ್ಲಿದ್ದ ಕಂದಕವನ್ನು ಬೆಸೆಯಿತು. ಮೇಲು ಕೀಳಿನ ಜಾತಿಯನ್ನು ನಿರಾಕರಿಸಿ ಸಮಾನ ಭಾವನೆಯ ಭಕ್ತಿಮಾರ್ಗವನ್ನು ಅನುಸರಿಸುವ ವಿಧಾನವನ್ನು ಸಮುದಾಯಗಳಲ್ಲಿ ಬಿತ್ತಲಾಯಿತು. ಪ್ರತಿಯೊಬ್ಬರು ಹುಟ್ಟಿನಿಂದ ಮನ್ನಣೆಯನ್ನು ಪಡೆಯದೆ ನಡೆ ನುಡಿಯಿಂದ ಮನ್ನಣೆ ಪಡೆಯಬೇಕೆಂಬ ನವ ನೈತಿಕತೆಯನ್ನು ಹುಟ್ಟು ಹಾಕಿದರು. ಸರ್ವರು ಈ ದಾರಿಯನ್ನು ಅನುಸರಿಸುವ ಸ್ವಾತಂತ್ರ್ಯವನ್ನು ನೀಡಿದರು. ಇದರಿಂದಾಗಿ ಎಲ್ಲಾ ಜಾತಿ ಸಮುದಾಯಗಳು ಭಕ್ತಿ ಮಾರ್ಗವನ್ನು ಅನುಸರಿಸಿ ತಮ್ಮ ಅಭಿವ್ಯಕ್ತಿಯನ್ನು ಮಾಡಿದರು. ಇದರಿಂದಾಗಿ ವೈವಿದ್ಯತೆಯ ಸಾಮಾಜಿಕ ಬಂಧವು ಬಿಗಿಗೊಂಡಿತು. ನಿಜವಾದ ಜಾತ್ಯಾತೀತ ಮೌಲ್ಯಗಳ ಅನುಷ್ಠನವೂ ನಡೆಯಿತು. ಪ್ರಭುತ್ವ ಪ್ರಣೀತ ಅಂಕುಶಗಳು ಈ ವೈವಿದ್ಯತೆಯ ಬದುಕಿನ ಮೇಲೆ ಹಿಡಿತ ಸಾಧಿಸುವ ಹುನ್ನಾರವನ್ನು ಮಾಡುತ್ತಲೇ ಇರುತ್ತದೆ. ಅದನ್ನು ಅರಿಯಾಗಿ ಅರ್ಥ ಮಾಡಿಕೊಂಡು ತಮ್ಮತನವನ್ನು ಸಮುದಾಯಗಳು ಉಳಿಸಿಕೊಳ್ಳುವ ದಾರಿಯನ್ನು ವಚನಕಾರರು ಕಂಡುಕೊಂಡರು. ಆದ್ದರಿಂದ ಪ್ರಭುತ್ವ ಒಪ್ಪುವ ಬದುಕಿಗೆ ವಿಮುಖರಾಗಿ ಸಕಲ ಜೀವ ಸಂಕುಲಗಳನ್ನು ಒಳಗೊಳ್ಳುವ ಬದುಕಿನ ವಿನ್ಯಾಸವನ್ನು ರೂಪಿಸಿಕೊಂಡರು.

ವಚನಕಾರರ ಬದುಕು ಮತ್ತು ಸಾಹಿತ್ಯ ರಚನೆ ಹೊಸ ಬಗೆಯ ಸಂಸ್ಕೃತಿಯನ್ನು ರಚಿಸುತ್ತದೆ. ಪ್ರಭುತ್ವಕ್ಕೆ ವಿರುದ್ಧವಾದ ದೈವಿಕ ಪ್ರಕೃತಿ ತತ್ವದ ಸಂಸ್ಕೃತಿ ನಿರ್ವಚನ ಇವರದು. ಈಗಾಗಲೆ ರೂಪಗೊಂಡಿದ್ದ ಸಂಸ್ಕಾರಯುತ ಮೌಲ್ಯದ ಸಂಸ್ಕೃತಿ ಚಿಂತನೆಗೆ ಪರ್ಯಾಯವಾದ ಬಹುತ್ವವನ್ನು ಒಳಗೊಂಡ ಸಂಸ್ಕೃತಿ ಚಿಂತನೆಯನ್ನು ಮಾಡಿದರು. ದುಡಿಮೆಯನ್ನೊಳಗೊಂಡ ಬದುಕಿನ ವಿನ್ಯಾಸವನ್ನು ಭಕ್ತಿಯ ನೆಲೆಯಲ್ಲಿ ತಾತ್ವಿಕಗೊಳಿಸುವ ಪ್ರಯತ್ನ ಅವರದಾಗಿತ್ತು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ

ಕಂದಾಚಾರವನ್ನು ಪ್ರಶ್ನಿಸುವದರ ಮೂಲಕ ಧರ್ಮದ ನಿಜ ತಿರುಳನ್ನು ದರ್ಶನ ಮಾಡಿದರು. ಮೇಲ್ವನೆಯ ಶಿಷ್ಟ ಮಾದರಿಯ ಜೀವನಕ್ಕೆ ಕೆಳಸ್ತರದ ಸಮಷ್ಟಿಯ ಚೈತನ್ಯವನ್ನು ಮುಖಾಮುಖಿಯಾಗಿಸಿದರು.

ಯಾವುದೇ ಭಾಷಿಕ ಅಭಿವ್ಯಕ್ತಿ ನಡೆಯನ್ನು ತಿದ್ದಿ ನಡೆಸಬೇಕು. ಆ ಮೊದಲು ಅಭಿವ್ಯಕ್ತಿಸುವವರು ತಮ್ಮ ನಡೆಯನ್ನು ಶುದ್ದಿಕರಿಸಿಕೊಳ್ಳಬೇಕು. ಇಲ್ಲದಿದ್ದರೆ ನುಡಿ ಹುಸಿಯಾಗುತ್ತದೆ. ನಿಜತ್ವ ಕಳೆದುಹೋಗುತ್ತದೆ. ನುಡಿ ನಡೆ ಶುದ್ದವಿಲ್ಲದವರನ್ನು ಸಮಾಜ ಒಪ್ಪುವದಿಲ್ಲ. ನುಡಿ ಒಂದಿದ್ದು ನಡೆ ಇನ್ನೊಂದಾದಡೆ ಅದು ದ್ರೋಹ. ಈ ಎಚ್ಚರದಲ್ಲಿ ಆಲೋಚನೆಯನ್ನು ಬಿತ್ತಬೇಕು. ಇದು ಬಸವಣ್ಣನವರ ನಂಬಿಕೆಯಾಗಿತ್ತು. ತಮ್ಮ ಜೊತೆಗಾರರಿಗೆ ಈ ದಾರಿ ತುಳಿಯಲು ಪ್ರೇರೇಪಿಸಿದರು. ಇವರ ಮಾರ್ಗದರ್ಶನದಿಂದ ವೃತ್ತಿ ವಚನಕಾರರು ಸ್ವತಂತ್ರ ಅಭಿವ್ಯಕ್ತಿಯನ್ನು ನಿರ್ವಚಿಸಲು ಸಾಧ್ಯವಾಯಿತು. ಇದರಿಂದಾಗಿ ಸಾಮಾಜಿಕವಾಗಿ ಕೀಳಾಗಿದ್ದ ವೃತ್ತಿಗಳೆಲ್ಲ ತಮ್ಮ ಘನತೆಗಳನ್ನು ಉಳಿಸಿಕೊಳ್ಳಲು ಸಾದ್ಯವಾಯಿತು. ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಸ್ಥಾಪಿಸುವಂತಾಯಿತು. ಸಾಮಾಜಿಕ ಚರಿತ್ರೆಯಲ್ಲಿ ಸ್ಥಾನವೇ ಇಲ್ಲದ ವೃತ್ತಿಪರ ಸಮುದಾಯಗಳು ಲೋಕವನ್ನು ಕುರಿತು ಯೋಚಿಸುವಂತಾಯಿತು. ಇದೊಂದು ಸರ್ವಕಾಲಕ್ಕೂ ಮಾದರಿಯಾದ `ಜೀವ ಸಂಕುಲ' ಪರ ಚಿಂತನೆಯಾಗಿದೆ.

ಬಸವಣ್ಣ ಸಾಮಾಜಿಕವಾಗಿ ಕೀಳೆನ್ನುವ ಬೆವರಿನ ವೃತ್ತಿಗಳಿಗೆ ಘನತೆಯನ್ನು ತಂದುಕೊಟ್ಟನು. ಬದುಕಿನಲ್ಲಿ ಯಾವ ವೃತ್ತಿಯು ಕೀಳಲ್ಲ ಎಂಬ ಆತ್ಮವಿಶ್ವಾಸವನ್ನು ಸಮುದಾಯಗಳಲ್ಲಿ ಮೂಡಿಸಿದನು. ಇದರಿಂದ ಅನೇಕ ವಚನಕಾರರು ತಮ್ಮ ವೃತ್ತಿಯ ಪರಿಭಾಷೆಯನ್ನೇ ಎಲ್ಲರನ್ನು ಒಳಗೊಳ್ಳುವ ಭಕ್ತಿಯ ಪರಿಭಾಷೆಯನ್ನಾಗಿ ರೂಪಿಸಿಕೊಂಡರು. ಇವರು ಲೋಕವನ್ನು ನೋಡುವ ದೃಷ್ಟಿಕೋನವು ವಿಭಿನ್ನವಾಯಿತು. ಅಭಿವ್ಯಕ್ತಿಯಲ್ಲಿ ಧರ್ಮ-ಸಮಾಜ-ಸಮಾನತೆಯನ್ನು ಬೆಸೆಯುವ ಆಂದೋಲನವನ್ನು ಮಾಡಿದರು.

ಬಸವಣ್ಣ ಮನುಷ್ಯನ ಘನತೆ ಮತ್ತು ಸ್ವಾತಂತ್ರ್ಯಕ್ಕೆ ಮಾನ್ಯತೆ ನೀಡಿದರು. ಪ್ರತಿಯೊಬ್ಬರು ತಮ್ಮ ಆಲೋಚನೆಯನ್ನು ನಿರ್ಭಿಡೆಯಿಂದ ಅಭಿವ್ಯಕ್ತಿ ಮಾಡುವ ವಾತಾವರಣವನ್ನು ಸೃಷ್ಟಿಸಿದರು. ಅವರು ಇನ್ನೊಬ್ಬರಿಗೆ ಕೇಡಿಲ್ಲದಂತೆ ಅಭಿವ್ಯಕ್ತಿ ಮಾಡುವ ಸ್ವಾತಂತ್ರವನ್ನು ಪ್ರತಿಯೊಬ್ಬರ ಹಕ್ಕೆಂಬುದನ್ನು ಪ್ರತಿಪಾದಿಸಿದರು. ಯಾವುದೆ ತಿಳಿವು ಇನ್ನೊಬ್ಬರ ಬೌದ್ದಿಕ ವಿಕಾಸಕ್ಕೆ ಕಾರಣವಾಗಬೇಕು. ನಾಶ ಮಾಡಲು, ಅಧೀನದಲ್ಲಿಟ್ಟುಕೊಳ್ಳಲು, ಭಯ ಹುಟ್ಟಿಸಲು ಅಲ್ಲ. ಏಕೆಂದರೆ ಜ್ಞಾನವನ್ನು ಸೃಷ್ಟಿಸಿದ್ದೇವೆನ್ನುವ ಮಹಿಮರು ಅನೇಕ ವೃತ್ತಿಪರ ಸಮುದಾಯಗಳನ್ನು ಅಸಡ್ಡೆಯಿಂದ ನೋಡಿದ ಸಾಕ್ಷಿಗಳು ಚರಿತ್ರೆಯಲ್ಲಿವೆ. ಅದಕ್ಕೆ ಬಸವಣ್ಣನವರು ಕೇಡು ಬಗೆಯದೆ ಅಭಿವ್ಯಕ್ತಿಸಬೇಕೆಂದು ಹೇಳಿದರು.

ಹುಟ್ಟುತ್ತಲೆ ಜಾತಿಯನ್ನು ನಿರ್ಣಯಿಸುವದನ್ನು ವಚನಕಾರರು ಒಪ್ಪುವದಿಲ್ಲ. ಕುಲದ ಹೆಸರಿನಲ್ಲಿ ಮನುಷ್ಯರ ನಡುವೆ ಒಡಕು ತರುವುದನ್ನು ವಿರೋಧಿಸುತ್ತಾರೆ. ಆ ನೆಲೆಯಲ್ಲಿ ಆಚರಣೆಗಳನ್ನು ಕಟ್ಟುವುದರ ಬಗ್ಗೆ ಅವರಿಗೆ ತೀವ್ರವಾದ ಆಕ್ರೋಶವಿದೆ. ಈ ಲೋಕದಲ್ಲಿ ಯಾವುದು ಪವಿತ್ರವಿಲ್ಲ. ಪ್ರಕೃತಿಯೆ ಒಂದಕ್ಕೊಂದು ಅವಲಂಬಿಸಿ ಬದುಕುವ ಜೀವಸರಪಳಿಯನ್ನು ಸೃಷ್ಟಿಸಿದೆ. ಅದರಲ್ಲಿ ಇದು ಶುದ್ದ ಎಂದು ಜನರನ್ನು ನಂಬಿಸುವುದು ಮೂರ್ಖತನ. ಹೀಗಾಗಿ ಕುಲವೆಂಬುದು ಇಲ್ಲವೇ ಇಲ್ಲ. ಪಂಚಭೂತಗಳೇ ಪರಸ್ಪರ ಎಂಜಲಿನಿಂದ ಕೂಡಿರುವಾಗ ಎಲ್ಲಿ ಮನುಷ್ಯರ ನಡುವೆ ಭೌತಿಕ ಪರಿಶುಧ್ದತೆ ಬರುತ್ತದೆ. ಆದ್ದರಿಂದ ಎಲ್ಲಾರನ್ನು ಸಮಾನ ಭಾವನೆಯಿಂದ ಜಾತ್ಯಾತೀತವಾಗಿ ಕಾಣುವುದು ನಿಜವಾದ ಸಂಸ್ಕೃತಿ.

ಮನುಷ್ಯರನ್ನು ಪ್ರೀತಿ ವಿಶ್ವಾಸದಿಂದ ಕಾಣುವುದೆ ಧರ್ಮ. ಅದಕ್ಕಿಂತಲೂ ಮಿಗಿಲಾದ ಧರ್ಮವಿಲ್ಲ ಎಂದು ಶರಣರು ನಂಬಿದವರು. ಹೊರಗಿನ ಕುರುಹುಗಳಿಂದ ಧರ್ಮವನ್ನು ನರ್ಮಿಸಲು ಆಗುವದಿಲ್ಲ. ಲೋಕವನ್ನು ದಯೆಯಿಂದ ಕಾಣಬೇಕು. ಅದಕ್ಕೆ ಲೌಕಿಕದ ಹಂಗನ್ನು ತೊರೆಯಬೇಕು. ಬದುಕಿನ ಎಲ್ಲಾ ಮೋಹಪಾಶಗಳನ್ನು ಬಿಟ್ಟು ವಿರಕ್ತಿಯಾಗಿ ಸಾಮಾಜಿಕ ಬದುಕಿನಲ್ಲಿ ಒಂದಾಗುವುದು ದಯೆ. ದಯೆಯಿಲ್ಲದ ಧರ್ಮಕ್ಕೆ ಅರ್ಥವೆ ಇಲ್ಲ ಎಂಬುದು ಚೌಡಯ್ಯನ ನಿಲುವು. ಧರ್ಮಗಳು ಅನೇಕ ಕರ್ಮಠ ನಿಯಮಗಳ ಮೂಲಕ ಜನರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಗೊಡ್ಡು ಆಚರಣೆಯಲ್ಲಿ ಮುಳಿಗಿಸುವದನ್ನು ಇವರು ಒಪ್ಪುವದಿಲ್ಲ. ಗುರು, ಜಂಗಮ, ಪ್ರಸಾದ ತತ್ವವು ದಯೆಯಿಂದ ಕೂಡಿರಬೇಕು. ಕಂದಾಚಾರದ ಧರ್ಮಕ್ಕೆ ವಿರುದ್ಧವಾಗಿ ದಯೆಯ ಧರ್ಮವನ್ನು ಸಂಸ್ಕೃತಿಯಾಗಿ ಬೆಳೆಸಿದರು.

ಸಮಾಜದಲ್ಲಿ ಸಮಾನತೆಯನ್ನು ತರುವುದು ಇವರ ನಿಲುವಾಗಿತ್ತು. ಅದಕ್ಕೆ ಶಿವನನ್ನು ತಮ್ಮ ಪ್ರತೀಕವನ್ನಾಗಿಸಿದರು. ಬೇರೆ ಬೇರೆಯ ದೈವಗಳಿಗೆ ನಡೆದುಕೊಳ್ಳುವದಕ್ಕಿಂತ ಶಿವನನ್ನು ಆರಾಧಿಸುವುದು ಭಕ್ತನಿಗೆ ಮುಖ್ಯವಾಗಬೇಕು. ಶಿವನನ್ನು ಪ್ರತಿಯೊಬ್ಬರು ಆರಾಧಿಸುವುದರ ಮೂಲಕ ಒಟ್ಟಾಗಬೇಕು. ಆಗ ಸಮಾನತೆಯ ಸಮಾಜ ನಿರ್ಮಾಣವಾಗುತ್ತೆಂದು ಅವರು ನಂಬಿದ್ದರು.

## ಉಪಸಂಹಾರ:

ವ್ಯವಸ್ಥೆಯಲ್ಲಿ ಪ್ರಜೆ ಸರ್ವ ಸ್ವತಂತ್ರನಾಗಿರುವುದು ಪ್ರಜಾತಾಂತ್ರಿಕ ಸಂಸ್ಕೃತಿ. ಇನ್ನೊಬ್ಬರಿಗೆ ಕೇಡಿಲ್ಲದಂತೆ ಬದುಕುವುದು ಸ್ವತಂತ್ರವಾಗುತ್ತದೆ. ಮನಸ್ಸಿಗೆ ಬಂದಂತೆ ಬದುಕುವುದು ನಡೆದುಕೊಳ್ಳುವುದು ಸ್ವತಂತ್ರವಾಗುದಿಲ್ಲ. ಸಮಾಜದ ಉದ್ಧಾರಕ್ಕೆ ತನ್ನನ್ನು ಸಂಪೂರ್ಣ ತೊಡಗಿಸಿಕೊಳ್ಳುವವನು ಪ್ರಜಾತಾಂತ್ರಿಕ ಸಂಸ್ಕೃತಿಯನ್ನು ಅನುಸರಿಸುತ್ತಾನೆ. ಪ್ರಭುತ್ವದ ಹಂಗಿಗೆ ಒಳಗಾಗದೆ ಸ್ವತಂತ್ರವಾಗಿ ಚಿಂತಿಸುವುದು, ಕಾಯದ ಮೋಹವನ್ನು ಕಳೆದುಕೊಳ್ಳುವುದು ಮೌಲ್ಯ. ಆ ಮೌಲ್ಯದಲ್ಲಿ ಬದುಕಿದಾಗ ಪ್ರಜಾತಾಂತ್ರಿಕ ಸಂಸ್ಕೃತಿ ಗಟ್ಟಿಯಾಗುತ್ತದೆ.

## ಆಕರ ಗ್ರಂಥಗಳು:


- ಸಂಕೀರ್ಣ ವಚನ ಸಂಪುಟ, ಸಂ. ಡಾ. ಎಂ. ಎಂ. ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೧
- ವಚನ ಸಾಹಿತ್ಯ ಸಂಪುಟ - ೪, ಡಾ. ಎಂ. ಚಿದಾನಂದ ಮೂರ್ತಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೨೦೦೦.
- ಶರಣ ತತ್ವ ಚಿಂತನ, ಡಾ. ಎ.ಎಲ್. ಶಿವರುದ್ರಪ್ಪ (ಸಂ.), ಜೆ ಎಸ್ ಎಸ್ ಮಹಾವಿದ್ಯಾಪೀಠ, ಮೈಸೂರು, ೧೯೯೮.
- ಶರಣರ ಅನುಭಾವ ಸಾಹಿತ್ಯ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ ಪ್ರಕಾಶಕರು, ಮೈಸೂರು, ೧೯೯೮.